(ಇಂದು ದಿನಾಂಕಃ 31–07–2026 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀ ಆರ್ ಎಂ ಆರ್ ವಕೀಲರಿಂದ ಃ-

11) ನಿಂಗವ್ವ ಕೋಂ ಶಿವಪ್ಪ ಅಲ್ಲಮ್ಮನವರ ನನ್ನ ಅಜ್ಜಿ. ಅವರಿಗೆ ಅಡಿವೆಮ್ಮ ಎನ್ನುವ ಒಬ್ಬರೇ ಮಗಳು. ನಿಂಗವ್ವ ಕೋಂ ಶಿವಪ್ಪ ಅಲ್ಲಮ್ಮನವರ ರವರಿಗೆ ಬಸಪ್ಪ ಫಕ್ಕೀರಪ್ಪ ಅಲ್ಲಮ್ಮನವರ ರವರು ದತ್ತಕ ಮಗ. ಸಂಗಪ್ಪ ಹನುಮಪ್ಪ ತಳವಾರ ರವರು ನನಗೆ ಗೊತ್ತಿಲ್ಲ. ನಿಂಗವ್ವ ಮತ್ತು ಬಸಪ್ಪ ರವರ ವಿರುದ್ಧ ಸಂಗಪ್ಪ ಹನುಮಪ್ಪ ತಳವಾರ ರವರು ಧಾರವಾಡ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ 1992-93 ರಲ್ಲಿ ದಾವಾ ಆಸ್ತಿಗೆ ಸಂಬಂದಿಸಿದಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನಿಜ. ದಾವಾ ಆಸ್ತಿಗೆ ಸಂಬಂದಿಸಿದಂತೆ ನಿಂಗವ್ವ, ಬಸಪ್ಪ ಹಾಗೂ ಸಂಗಪ್ಪ ಹನುಮಪ್ಪ ತಳವಾರ ರವರ ನಡುವೆ 1992-93 ರಿಂದ ಪ್ರಕರಣಗಳು ನಡೆಯುತ್ತಾ ಬಂದಿವೆ ಎಂದರೆ ನನಗೆ ಗೊತ್ತಿಲ್ಲ.

12) ಹನುಮಪ್ಪ ಮಲ್ಲಪ್ಪ ತಳವಾರ ಉರ್ಪ ಅಲ್ಲಮ್ಮನವರ ಇವರು ನನ್ನ ಅಜ್ಜ, ಶಿವಪ್ಪರವರ ಅಣ್ಣ. ನಿಂಗವ್ವ ಕೋಂ ಶಿವಪ್ಪ ತಳವಾರ ಹಾಗೂ ಹನುಮಪ್ಪ ತಳವಾರ ರವರ ನಡುವೆ ಕೆಲವು ಆಸ್ತಿಗಳಿಗೆ ಸಂಬಂದಿಸಿದಂತೆ ತಂಟೆ ಇದ್ದವು ಎಂದರೆ ನನಗೆ ಗೊತ್ತಿಲ್ಲ. 1984 ರಲ್ಲಿ ಊರಿನ ಹಿರಿಯರು ಸದರಿ ನಿಂಗವ್ವ ಕೋಂ ಶಿವಪ್ಪ ತಳವಾರ ಹಾಗೂ ಹನುಮಪ್ಪ ತಳವಾರ ರವರ ನಡುವೆ ಸರ್ವೆ ಸಂಖ್ಯೆ 451 ಜಮೀನಿಗೆ ಸಂಬಂದಿಸಿದಂತೆ ವಾಟನಿ ತಂಟೆಯನ್ನು ರಾಜೀ ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ರಾಜೀ ಪ್ರಕಾರ ಸರ್ವೆ ಸಂಖ್ಯೆ 451 ರ ಜಮೀನು ಬಸಪ್ಪ ಫಕ್ಕೀರಪ್ಪ ಉಡಚನ್ನವರ ಹಾಗೂ ಹನುಮಪ್ಪ ಮಲ್ಲಪ್ಪ ತಳವಾರ ಉರ್ಪ ಅಲ್ಲಮ್ಮನವರ ರವರ ಪಾಲಿಗೆ ಹೋಗಬೇಕೆಂದು ಹಾಗೂ ಸರ್ವೆ ಸಂಖ್ಯೆ 424/1 ರ ಜಮೀನು ನಿಂಗವ್ವ ಕೋಂದ ಶಿವಪ್ಪ ತಳವಾರ ಹಾಗೂ ಬಸಪ್ಪ ಫಕ್ಕೀರಪ್ಪ ಉಡಚನ್ನವರ ರವರ ಪಾಲಿಗೆ ಹೋಗಬೇಕೆಂದು ತಿರ್ಮಾನವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಂಗವ್ವ ಶಿವಪ್ಪ ತಳವಾರ ಇವರು ಬಸಪ್ಪ ಫಕ್ಕೀರಪ್ಪ ಅಲ್ಲಮ್ಮನವರ ರವರನ್ನು ಯಾವ ವರ್ಷದಲ್ಲಿ ದತ್ತಕ ತೆಗೆದುಕೊಂಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿಯವರ ದತ್ತಕ ಪತ್ರವನ್ನು ನಾನು ನೋಡಿಲ್ಲ. ನನ್ನ ತಾಯಿ ಜೀವಂತವಿದ್ದಾರೆ.

13) ಸರ್ವೆ ಸಂಖ್ಯೆ 424/1 ಕ್ಷೇತ್ರ 01 ಎಕ್ರೆ 20 ಗುಂಟೆ ಜಮೀನಿನ ದಕ್ಷಿಣಕ್ಕೆ ಕೆಂಚವ್ವ ಸಿದ್ದಲಿಂಗಪ್ಪ ತಳವಾರ ರವರ ಜಮೀನು ಇದೆ. ಉತ್ತರಕ್ಕೆ ಇರುವ ಜಮೀನಿನ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಹಾಗೂ ಅದರ ದಕ್ಷಿಣಕ್ಕೆ ಇರುವ ಪ್ರತಿವಾದಿಯ ಜಮೀನನ್ನು ಸೇರಿಸಿ

ಪ್ರತಿವಾದಿಯು 1992-93 ರಿಂದ ಇವತ್ತಿನವರೆಗೂ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಈಗ ಯಾವುದೆ ಬೆಳೆ ಇಲ್ಲಾ. ದಾವಾ ಆಸ್ತಿಯ ದಕ್ಷಿಣಕ್ಕೆ ಇರುವ ಪ್ರತಿವಾದಿಯ ಜಮೀನಿನಲ್ಲಿ ಹೆಸರು ಬೆಳೆ ಇದೆ. ನಾನು ಯಾವತ್ತೂ ದಾವಾ ಆಸ್ತಿಯ ಸ್ವಾಧಿನದಲ್ಲಿ ಇಲ್ಲಾ ಅಂದರೆ ಸರಿಯಲ್ಲ. ಸರ್ಕಾರದಿಂದ ಸಿಗುವ ಸೌಲಭ್ಯಕ್ಕೆ ಸಂಬಂದಿಸಿದಂತೆ ದಾವಾ ಆಸ್ತಿಯ ಎಫ್ಐಡಿ ಕಾರ್ಡ ಮಾಡಿಸಿದ್ದೇನೆ. 6-7 ವರ್ಷಗಳ ಹಿಂದೆ ಮಾಡಿಸಿದ್ದೇನೆ. ದಾವಾ ಆಸ್ತಿಗೆ ಸಂಬಂದಿಸಿದಂತೆ ಸರ್ಕಾರದಿಂದ ಬೆಳೆ ವಿಮೆ ಹಣ ಪಡೆದಿದ್ದೇನೆ. ಅದರ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ.

14) ಪ್ರತಿವಾದಿಯು ದಾವಾ ಆಸ್ತಿಯನ್ನು ಸೇರಿಸಿಕೊಂಡು ತನ್ನ ಜಮೀನನ್ನು ಏಕತ್ರ ಸ್ವಾದಿನದಲ್ಲಿದ್ದಾರೆ ಅಂದರೆ ಸರಿಯಲ್ಲ. ನಾನು, ಅಕ್ಕಮಹಾದೇವಿ, ಶಿವಪ್ಪ ಹಾಗೂ ಮಲ್ಲವ್ವ ರವರು ಯಾವತ್ತೂ ಶಲವಡಿ ಗ್ರಾಮದಲ್ಲಿ ವಾಸವಿಲ್ಲ ಅಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಮಾಲೀಕನಲ್ಲ ಅಂದರೆ ಸರಿಯಲ್ಲ. ನನ್ನ ಕುಟುಂಬ ಸದಸ್ಯರಿಗೆ ಗೊತ್ತಾಗದಂತೆ ಪ್ರತಿವಾದಿಯ ಆಸ್ತಿಯನ್ನು ನಾನು ಕಬಳಿಸುವ ಉದ್ದೇಶದಿಂದ ನಾನೊಬ್ಬನೇ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿದ್ದೆನೆ ಅಂದರೆ ಸರಿಯಲ್ಲ. ನನಗೆ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಉಂಟಾಗಿಲ್ಲ ಅಂದರೆ ಸರಿಯಲ್ಲ. ನಾನು ಯಾವತ್ತೂ ದಾವಾ ಆಸ್ತಿಗೆ ಹೋಗಿಲ್ಲ ಅಂದರೆ ಸರಿಯಲ್ಲ. ನಾನು ನಿಜ ಸಂಗತಿಗಳನ್ನು ಮುಚ್ಚಿಟ್ಟು ಪ್ರತಿವಾದಿಯ ವಿರುದ್ದ ಕೊಟ್ಟಿ ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ಮಲ್ಲಿಕಾರ್ಜುನ)

**C/c ದಿವಾಣಿ ನ್ಯಾಯಾಧೀಶರು ನವಲಗುಂದ.**